ಕರ್ನಾಟಕ ಸರ್ಕಾರ

**ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು**

ಸಂಖ್ಯೆ: ಎ.ಡಿ.ಎಂ-2(2)/ಕನ್ನಡಕ ವಿತರಣೆ/2020-21 ದಿನಾಂಕ-29-12-2020

-: ಜ್ಞಾಪನ :-

ವಿಷಯ:- ಶಾಲಾ ಮಕ್ಕಳಿಗೆ ಕನ್ನಡಕ ವಿತರಣೆ ಬಗ್ಗೆ.

ಉಲ್ಲೇಖ:- ಅಭಿಯಾನ ನಿರ್ದೇಶಕರು, ರಾಷ್ಟ್ರೀಯ ಆರೋಗ್ಯ ಅಭಿಯಾನ, ಕರ್ನಾಟಕ ರವರ ಪತ್ರ ಸಂಖ್ಯೆ: ಬಿಸಿಡಿ/9/ಎನ್.ಪಿ.ಸಿ.ಬಿ&ವಿ.ಐ/2020-21 ದಿನಾಂಕ-09-12-2020.

&&&&&

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಪ್ರಸಕ್ತ ಕೋವಿಡ್-19 ಸಂಕ್ರಾಮಿಕ ಪರಿಸ್ಥಿತಿಯಲ್ಲಿ ಶಾಲೆಗಳು ಮುಚ್ಚಿರುವ ಕಾರಣ, ಶಾಲೆಗಳಲ್ಲಿ Refractive errors ಮತ್ತು ಕಣ್ಣಿನ ದೃಷ್ಠಿ ದೋಷ ಹೊಂದಿರುವ ಮಕ್ಕಳನ್ನು ಪರೀಕ್ಷಿಸಿ ಕನ್ನಡಕವನ್ನು ಒದಗಿಸಲು ಸಾಧ್ಯವಾಗದ ಹಿನ್ನಲೆಯಲ್ಲಿ ರಾಜ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶನಾಲಯ, ಆರೋಗ್ಯ ಸೌಧ, ಬೆಂಗಳೂರು ವತಿಯಿಂದ ರಾಜ್ಯದ ಶಾಲಾ ಮಕ್ಕಳಿಗೆ ಕಣ್ಣಿನ ತಪಾಸಣೆ ಮಾಡಿ ಕನ್ನಡಕವನ್ನು ವಿತರಿಸಲು ಈ ಕೆಳಕಂಡಂತೆ ಚಟುವಟಿಕೆಗಳನ್ನು ಹಮ್ಮಿಕೊಂಡಿರುತ್ತಾರೆ.

- 1 ರಿಂದ 5ನೇ ತರಗತಿ ಮಕ್ಕಳಿಗೆ ಹಿಂದಿನ ವರ್ಷದ ಪ್ರಿಸ್ಕ್ರಿಪ್ಷನ್ಸ್ ಆಧಾರದ ಮೇಲೆ ಕನ್ನಡಕಗಳನ್ನು ವಿತರಿಸುವುದು.
- 6 ರಿಂದ 10 ನೇ ತರಗತಿಯ ಮಕ್ಕಳು ವಯೋ ಸಹಜ ಬೆಳವಣಿಗೆ ಹೊಂದುವುದರಿಂದ ಈ ಮಕ್ಕಳನ್ನು ಕಣ್ಣಿನ ಪರೀಕ್ಷೆಗೆ ಮುಂಚಿತವಾಗಿಯೇ ದಿನಾಂಕ ಮತ್ತು ಸಮಯ ಹಾಗೂ ಸ್ಥಳ ನಿಗದಿ ಪಡಿಸಿ 10-15 ಮಕ್ಕಳನ್ನೊಳಗೊಂಡ ತಂಡಗಳನ್ನು ಆಯಾ ಸ್ಥಳಗಳಿಗೆ ಕರೆಸಿ ಕಣ್ಣಿನ ತಪಾಸಣೆ ನಡೆಸಿ ಸೂಕ್ತ ಕನ್ನಡಕವನ್ನು ವಿತರಿಸಬಹುದು. ವಿಶೇಷವಾಗಿ ಹಿಂದಿನ ವರ್ಷಗಳಲ್ಲಿ Refractive errors ಇದ್ದಂತಹ ಮಕ್ಕಳನ್ನು ಕರೆಸುವುದು.
- ಅಲ್ಲದೆ, ಆಸ್ಪತ್ರೆಗಳಲ್ಲಿ ನೇತ್ರ ವಿಭಾಗಕ್ಕೆ ಹೊರರೋಗಿಗಳಾಗಿ ಬರುವ ಮಕ್ಕಳಿಗೆ ಸಹ ಕನ್ನಡಕಗಳನ್ನು ವಿತರಿಸುವುದು.
- ರಾಷ್ಟ್ರೀಯ ಅಂಧತ್ವ ಮತ್ತು ದೃಷ್ಠಿದೋಷ ನಿಯಂತ್ರಣಾ ಕಾರ್ಯಕ್ರಮ ಅಡಿಯಲ್ಲಿ ಕೈ ಜೋಡಿಸಿರುವ ಸ್ವಯಂ ಸೇವಾ ಸಂಸ್ಥೆಗಳು ಗುರುತಿಸಿರುವ Refractive errors ಇದ್ದಂತಹ ಮಕ್ಕಳಿಗೆ ಕನ್ನಡಕ ವಿತರಿಸುವುದು.

- ಮೇಲಿನ ಸನ್ನಿವೇಶಗಳ ಜೊತೆಗೆ, ಆರ್.ಬಿ.ಎಸ್.ಕೆ ತಂಡವು ವೈದ್ಯಕೀಯ ಪರೀಕ್ಷೆಗಾಗಿ ಅಂಗನವಾಡಿಗಳಿಗೆ ತೆರಳಿದಾಗ ಕೇಂದ್ರಗಳಿಗೆ ಶಾಲಾ ಮಕ್ಕಳನ್ನು ತಂಡಗಳಲ್ಲಿ ಆಹ್ವಾನಿಸಿ Refraction ನ್ನು ಕೈಗೊಳ್ಳಬಹುದು ಮತ್ತು ಮಾಹಿತಿಯನ್ನು ಮುಂದಿನ ಸೂಕ್ತ ಕ್ರಮಕ್ಕಾಗಿ ಜಿಲ್ಲಾ ಅಂಧತ್ವ ನಿಯಂತ್ರಣಾ ಕಾರ್ಯಕ್ರಮಾಧಿಕಾರಿಗಳೊಂದಿಗೆ ಹಂಚಿಕೊಳ್ಳುವುದು.
- ಅಲ್ಲದೆ ಸಾರ್ವತ್ರಿಕ ಲಸಿಕಾ ಕಾರ್ಯಕ್ರಮದಡಿ 10 ಮತ್ತು 16ನೇ ವಯಸ್ಸಿನಲ್ಲಿ ನೀಡಲಾಗುವ ಟಿ.ಡಿ ಲಸಿಕೆಗಾಗಿ ಮಕ್ಕಳು ಲಸಿಕಾ ಸತ್ರಗಳಿಗೆ ಬಂದಾಗ Refractive errors ಗಾಗಿ ಪರೀಕ್ಷಿಸುವುದು.
- ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಸೇರಿದ ಮಕ್ಕಳಿಗೆ ಆದ್ಯತೆ ನೀಡಲು, ತಂಡವು ಈ ಮಕ್ಕಳನ್ನು ಹಾಸ್ಟೆಲ್‌ಗಳಲ್ಲಿ ಪರೀಕ್ಷಿಸಿ ಕನ್ನಡಕಗಳನ್ನು ವಿತರಿಸುವುದು.

ಮೇಲಿನ ಎಲ್ಲಾ ಚಟುವಟಿಕೆಗಳನ್ನು ಕೋವಿಡ್-19 ನ ಸೋಂಕು ನಿವಾರಣಾ ಮುನ್ನೆಚ್ಚರಿಕೆ / ಎಸ್.ಓ.ಪಿ ಯಂತೆ ಶಾಲೆಗಳಲ್ಲಿ ವಿದ್ಯಾರ್ಥಿಗಳ ನೇತ್ರ ತಪಾಸಣೆ ನಡೆಸಲು ಹಾಗೂ ಉಚಿತವಾಗಿ ಕನ್ನಡಕಗಳನ್ನು ವಿತರಿಸಲು ಅಗತ್ಯ ಸಹಕಾರ ನೀಡಲು ( ಶಾಲಾ ಎಸ್.ಡಿ.ಎಮ್.ಸಿ ಸದಸ್ಯರು, ಮುಖ್ಯ ಶಿಕ್ಷಕರು ಹಾಗೂ ಸಹ ಶಿಕ್ಷಕರು ಸಹಿತ ) ಈ ಮೂಲಕ ತಿಳಿಸಿದೆ.

ನಿರ್ದೇಶಕರು (ಪ್ರಾಥಮಿಕ ಶಿಕ್ಷಣ)

ಇವರಿಗೆ,
1. ರಾಜ್ಯದ ಎಲ್ಲಾ ಉಪನಿರ್ದೇಶಕರು (ಆಡಳಿತ), ಸಾ.ಶಿ.ಇ, ಇವರಿಗೆ.
2. ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಸಾ.ಶಿ.ಇ, ಇವರಿಗೆ (ಉಪನಿರ್ದೇಶಕರುಗಳ ಮುಖೇನ).
3. ರಾಜ್ಯದ ಎಲ್ಲಾ ಪ್ರಾಥಮಿಕ ಮತ್ತು ಪ್ರೌಢಶಾಲಾ ಮುಖ್ಯ ಶಿಕ್ಷಕರುಗಳಿಗೆ (ಸಮುಚಿತ ಮಾರ್ಗದಲ್ಲಿ).
4. ಕಛೇರಿ ಪ್ರತಿ.